**3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಸಿಜೆಎಂ ರವರ ನ್ಯಾಯಾಲಯ ಧಾರವಾಡ.**

**ಸಿಸಿ ನಂಃ** -63/2025

**ಸತ್ಯ ಪ್ರತಿಜ್ಞೆ ಮಾಡಿಸಲಾಯಿತು ಃ 06.08.2026.**

**ಮುಂದುವರೇದ ಮುಖ್ಯ ವಿಚಾರಣೆ ಃ ಮಾನ್ಯ ಹಿಸಸಅ ರವರಿಂದ**

ರೂ.70 ರಿಂದ 80 ಸಾವಿರುವನ್ನು ಆರೋಪಿತರಿಗೆ ಹಿಂತಿರುಗಿಸಿರುತ್ತೇನೆ. ನಾನು ಹಣ ಹಿಂತಿರುಗಿಸಿದ್ದರೂ ಆರೋಪಿತರು ಒತ್ತೆ ಇಟ್ಟಿದ್ದ ವಾಹನವನ್ನು ಹಿಂತಿರುಗಿಸುವಂತೆ ಕೇಳಿದಾಗ ಆರೋಪಿತರು ರೂ. 2.50 ಲಕ್ಷವನ್ನು ನೀಡಲು ಹೇಳಿದರು. ಆದ್ದರಿಂದ ನಾನು ವಾಹನವನ್ನು ಕೇಳದೆ ಸಮ್ಮನೆ ಇದ್ದೆ. ಇಷ್ಟನ್ನು ಹೊರತು ಪಡಿಸಿ ಆರೋಪಿತರು ಬೇರೆನೂ ಹೇಳಿರುವುದಿಲ್ಲ ಮತ್ತು

ಬೇರೆನು ಮಾಡಿರುವುದಿಲ್ಲ. ಸುಮಾರು 03 ವರ್ಷಗಳ ಹಿಂದೆ ಈಗನೋಡುತ್ತಿರುವ ದೂರನ್ನು ಆರೋಪಿತ ವಿರುದ್ದ ನೀಡಿರುತ್ತೇನೆ. ದೂರನ್ನು **ನಿ.ಪಿ.01** ಮತ್ತು ಸಾಕ್ಷೀಯಸಹಿಯನ್ನು **ನಿ.ಪಿ.01(ಎ)** ಎಂದು ಗುರುತಿಸಲಾಯಿತು.

ಕೃತ್ಯ ಸ್ಥಳವನ್ನು ಪೋಲೀಸರಿಗೆ ನಾನೆ ತೋರಿಸಿರುತ್ತೇನೆ. ಆ ಸಮಯಕ್ಕೆ ಪೋಲೀಸ್‌ರು ಬರವಣಿಗೆ ಮಾಡಿಕೊಂಡು ಪೋಟೋ ತೆಗೆದಿರುತ್ತಾರೆ. ಮದ್ಯಾಹ್ನ ಸುಮಾರು 1.00 ರಿಂದ 1.30 ಗಂಟೆಗೆ ಸದರಿ ಬರವಣಿಗೆ ಮಾಡಿರುತ್ತಾರೆ. ಈಗನೋಡುತ್ತಿರುವ ದಾಖಲೆ ಸದರಿ ಬರವಣಿಗೆ ಆಗಿರುತ್ತದೆ ಮತ್ತು ಅದರಲ್ಲಿ ನನ್ನ ಸಹಿ ಇರುತ್ತದೆ. ದಾಖಲೆಯು ಪಂಚನಾಮೆ ಆಗಿದ್ದೆ ಅದನ್ನು **ನಿ.ಪಿ.02** ಮತ್ತು ಸಾಕ್ಷೀಯ ಸಹಿಯನ್ನು **ನಿ.ಪಿ.02(ಎ)** ಎಂದು ಗುರುತಿಸಲಾಯಿತು. ಭಾವಚಿತ್ರದ ದೃಡಿಕೃತ ಪ್ರತಿಯನ್ನು **ನಿ.ಪಿ.03** ಅದಕ್ಕೆ ಸಂಬಂಧಿಸಿದ ಸಿಡಿಯನ್ನು **ನಿ.ಪಿ.03(ಎ)** ಎಂದು ಗುರುತಿಸಲಾಯಿತು. ನಾನು ಯಾವುದೇ ಪುನಃ ಹೇಳಿಕೆಯನ್ನು ಹೇಳಿರುವುದಿಲ್ಲ. ನ್ಯಾಯಾಲಯದ ಮುಂದೆ ಇರುವ 02 ನೇ ಆರೋಪಿ ನನಗೆ ಪರಿಚಯ ವಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ/ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಹಿಸಸಅ ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಮಾನ್ಯ ಹಿಸಸ ರವರಿಂದ**

ನನ್ನ ಗಂಡನಿಗೆ ಆನಾರೋಗ್ಯದ ಸಂಬಂಧ ನಾನು ಆರೋಪಿ 01 ರವರಿಂದ ರೂ.60,000/- ಕೈಗಡ ಸಾಲ ಪಡೆದುಕೂಂಡಿದ್ದೆ ಅಂದರೆ ಸರಿ. ನಂತರ ತಿಂಗಳಿಗೆ ರೂ.6,000/- ದಂತೆ ಒಟ್ಟು ರೂ.36000/- ವನ್ನು ಹಿಂತಿರುಗಿಸಿದ್ದೆ ಅಂದರೆ ಸರಿ. ರೂ.60,000/-ವನ್ನು ಆರೋಪಿ 01

ರವರಿಗೆ  ನೀಡಿ ದ್ವಿಚಕ್ರವಾಹನವನ್ನು ಹಿಂತಿರುಗಿಸಲು ಕೇಳಿದಾಗ ಆರೋಪಿ 01 ರವರು ರೂ. 1.50 ಲಕ್ಷ ಕೊಡಲು ಹೇಳಿದಾಗ ನಾನು ಗಾಡಿಯು ಬೇಡ  ಬಂಗಾರನು ಬೇಡ ಎಂದು ಸುಮ್ಮನೆ ಇದ್ದೆ ಎಂದರೆ ಸರಿ. ಆರೋಪಿ 01 ರವರು ಹೆಚ್ಚಿಗೆ ಹಣ ಕೊಡುವಂತೆ ಇಲ್ಲದಿದ್ದಲ್ಲಿ ನನ್ನ ಮಕ್ಕಳನ್ನು ಕಿಡ್ನಾಪ ಮಾಡಿಸುವುದಾಗಿ ಹೆದರಿಸುತ್ತಿದ್ದರಿಂದ ನಾನು ಆರೋಪಿ 01 ರವರಿಗೆ ಪ್ರತಿ ತಿಂಗಳು ರೂ.6000/- ಕೊಡುತ್ತಾ ಬಂದಿದ್ದೆ ಅಂದರೆ ಪ್ರತಿ ತಿಂಗಳುರೂ.6000/- ಕೊಡುತ್ತಿದ್ದೆ, ಆದರೆ ಆರೋಪಿ 01 ರವರು ಆ ರೀತಿ ಹೆದರಿಸಿರಲಿಲ್ಲ ಎನ್ನುತ್ತಾರೆ.  ಜನವರಿ 2024 ರಿಂದ ಗಾಡಿಯನ್ನು ವಾಪಸ್ಸು  ಕೊಡದೆ ಬಡ್ಡಿ ಹಣಕೊಡುವಂತೆ  ಆರೋಪಿ 01 ರವರು ಹೆದರಿಸುತ್ತಿದ್ದರಿಂದ ನಾನು ದೂರು ನೀಡಿರುತ್ತೇನೆ ಎಂದರೆ ಸರಿ.

ಪೋಲೀಸ್ ನಿ.ಪಿ.02 ಪಂಚನಾಮೆಯನ್ನು ದಿಃ21.08.2024 ರಂದು ಸಂಜೆ  5.00 ರಿಂದ 06.00 ಗಂಟೆವರೆಗೆ ಮಾಡಿರುತ್ತಾರೆಂದರೆ ಸರಿ.  ಆರೋಪಿ  01 ರವರು ಬಂಗಾದ ಗುಂಡುಗಳನ್ನು ನನಗೆ  ಮರಳಿ ಕೊಟ್ಟಿದ್ದು ಆ ಬಗ್ಗೆ ದೂರಿನಲ್ಲಿ ಟೈಪ ಮಾಡಿಸಿರುವುದಿಲ್ಲ ಎಂದು ಮತ್ತು  ಹಣ ವಸೂಲಿಗಾಗಿ ಆರೋಪಿ 01 ರವರೊಂದಿಗೆ ಆರೋಪಿ 02 ರವರು ನಮ್ಮ ಮನೆಗೆ ಬರುತ್ತಿದ್ದರು ಎಂದು ದಿಃ24.08.2024 ರಿಂದು ಪುನಃ ಹೇಳಿಕೆನೀಡಿರುತ್ತನೆ ಎಂದರೆ ಸರಿಯಲ್ಲ.   ಸಾಕ್ಷೀಯು ಅಲ್ಲಗಳೆದ ಪುನಃ ಹೇಳಿಕೆಯ ಭಾಗವನ್ನು **ನಿ.ಪಿ.04** ಎಂದು ಗುರುತಿಸಲಾಯಿತು.  ಈಗ ನನ್ನಗಂಡ ಮೃತ ಪಟ್ಟಿರುವುದರಿಂದ ನಾನು ಆರೋಪಿತರಿಗೆ ಹೆದರಿ 02 ನೇ ಆರೋಪಿ ಹಣ ವಸೂಲಿಗಾಗಿ ನಮ್ಮ ಮನೆಗೆ ಬರುತ್ತಿರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ  ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ ಸಮಯ ಕೋರಿದ್ದು ಯಾವುದೇ ಸಕಾರಣಗಳು ಇಲ್ಲದ ಕಾರಣ ಪಾಟೀ ಸವಾಲನ್ನು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

3 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ., ಧಾರವಾಡ.